UNIVERSITY LIBRARY
Agri Newspaper Clippings
Tuesday 04-11-2025
For more information visit University Library Website
Web - uasbagrilibindia.org
E-mail- librarian@uasbangalore.edu.in

ದೇಶದ ಸುಸ್ಥಿರಕ್ಕೆ ಕೃಷಿ, ಕೈಗಾರಿಕೆ ಮುಖ್ಯ

• **ಬೆಂಗಳೂರು:** ಕೃಷಿ, ಕೈಗಾರಿಕೆ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ತಜ್ಞರನ್ನು ಒಟ್ಟುಗೂಡಿಸಿ, ನಮ್ಮ ದೇಶ ಸುಸ್ಥಿರ, ಪೌಷ್ಟಿಕ ಮತ್ತು ಆರ್ಥಿಕವಾಗಿ ಸಮೃದ್ಧಗೊಳಿಸುವ ನಿಟ್ಟಿನಲ್ಲಿ ನಾವೆಲ್ಲ ಶ್ರಮಿಸಬೇಕು ಎಂದು ಕೃಷಿ ವಿಶ್ವ ವಿದ್ಯಾಲಯದ ಕುಲಪತಿ ಡಾ.ಎಸ್. ವಿ.ಸುರೇಶ ತಿಳಿಸಿದರು.

ಇದೇ ಮೊಟ್ಟ ಮೊದಲಬಾರಿಗೆ ಕೃಷಿ ವಿಶ್ವವಿದ್ಯಾನಿಲಯವು ಮಿಲ್ಕಿವೇ ಟೆಕ್ನಾಲಜೀಸ್ ಲಿಮಿಟೆಡ್, ಡಾ.ಕುರಾಡೆಸ್ ಮತ್ತು ಅಗ್ರೋ ಯೋಜನೆಗಳು, ಪೋಲ್ಯಾಂಡ್ ಇವರ ಸಹಯೋಗದೊಂದಿಗೆ ಆಯೋಜಿಸಿದ್ದ ಅಣಬೆ ಅಂತರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ, ಅಣಬೆ ಒಂದು ಪೌಷ್ಟಿಕ ಭರಿತ ಆಹಾರವಾಗಿದ್ದು, ಇದನ್ನು ಇನ್ನೂ ಹೆಚ್ಚು ಜನಪ್ರಿಯಗೊಳಿಸಲು ಈ ರೀತಿಯ ಸಮ್ಮೇಳನಗಳು ಅಗತ್ಯವಿದೆ. ಕೃಷಿ, ಕೈಗಾರಿಕೆ ಮತ್ತು ಸಂಶೋಧನಾ ಕ್ಷೇತ್ರಗಳ ತಜ್ಞರನ್ನು ಒಟ್ಟುಗೂಡಿಸಿ, ನಮ್ಮ ದೇಶದ ಸುಸ್ಥಿರ, ಪೌಷ್ಟಿಕ ಮತ್ತು ಆರ್ಥಿಕವಾಗಿ ಸಮೃದ್ಧಗೊಳಿಸುವ ಹಾದಿಯಲ್ಲಿ ನಾವೆಲ್ಲರೂ ಶ್ರಮಿಸಬೇಕು ಎಂದರು. ಇಂದು ಭಾರತವು ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿತ ರಾಷ್ಟ್ರವಾಗಿ ಹೊರಹೊಮ್ಮಿದೆ. ಈಗಿನ ಗುರಿ ಕೇವಲ ಆಹಾರ ಭದ್ರತೆ ಅಲ್ಲ, ಪೌಷ್ಟಿಕ ಭದ್ರತೆ. ಇದರ ಜತೆಗೆ ನಾವು ಪ್ರತಿಯೊಬ್ಬ ರೈತನೂ ವೈವಿಧ್ಯಮಯ ಕೃಷಿಯಿಂದ



ಲಾಭ ಪಡೆಯುವ ಮತ್ತು ರಾಸಾಯನಿಕರಹಿತ ಕೃಷಿ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಉತ್ತೇಜಿಸಬೇಕು. ಚೀನಾ ಮತ್ತು ಇತರ ದೇಶಗಳೊಂದಿಗೆ ಹೋಲಿಸಿದರೆ ಭಾರತದಲ್ಲಿ ಅಣಬೆಗಳ ಮಾರುಕಟ್ಟೆ ಇನ್ನೂ ಸೀಮಿತವಾಗಿದೆ. ಆದ್ದರಿಂದ ಈ ಉತ್ಪನ್ನವನ್ನು ಜನಪ್ರಿಯಗೊಳಿಸುವುದು ಮತ್ತು ಮಾರುಕಟ್ಟೆ ಜಾಲವನ್ನು ವಿಸ್ತರಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದರು.

ಸಣ್ಣ ರೈತರಿಗೆ ಹೆಚ್ಚು ಲಾಭ: ಡಾ.ಸಂಗಮ್ ಕುರಾಡೆಸ್ ಸಂಸ್ಥೆಯ ಮುಖ್ಯಸ್ಥ ಡಾ.ಕುರಾಡೆಸ್ ಮಾತನಾಡಿ, ಅಣಬೆ ಬೆಳೆಗಾರಿಕೆ ಅತ್ಯಂತ ಭರವಸೆಯ ಕ್ಷೇತ್ರವಾಗಿದ್ದು, ಅಣಬೆಗಳು ನಿಜಕ್ಕೂ ಒಂದು ಅದ್ಭುತ ಬೆಳೆಯಾಗಿದೆ. ಇದರಲ್ಲಿ ಪ್ರೋಟೀನ್, ವಿಟಮಿನ್ ಮತ್ತು ಖನಿಜಗಳಲ್ಲಿ ಸಮೃದ್ಧವಾಗಿದ್ದು, ಅಣಬೆ ಕೃಷಿ ಪರಿಸರ ಸ್ನೇಹಿ, ಕಡಿಮೆ ಹೂಡಿಕೆ ಮತ್ತು ಸಣ್ಣ ರೈತರಿಗೆ ಹೆಚ್ಚು ಲಾಭ ನೀಡುವ ಚಟುವಟಿಕೆಯಾಗಿದೆ. ವರ್ಷಪೂರ್ತಿ ಅತಿ ಕಡಿಮೆ ಭೂಮಿ ಮತ್ತು ನೀರಿನಿಂದಲೂ ಬೆಳೆಸಬಹುದಾಗಿದೆ. ಆದ್ದರಿಂದ ಇದು ಸಣ್ಣ ಜಾಗದಲ್ಲಿಯೂ ಲಾಭದಾಯಕ ಉದ್ಯಮವಾಗಿ ರೂಪಾಂತರಗೊಳ್ಳುವ ಸಾಮರ್ಥ್ಯ ಹೊಂದಿದೆ ಎಂದರು.

Hosa Digantha. Pg.03

Mushrooms key to achieving nutritional security, says UAS-B V-C

The Hindu Bureau
BENGALURU

The green revolution helped us achieve food security, but now we need to look at nutritional security, for which mushroom cultivation is both promising and key, said S.V. Suresh, Vice-Chancellor, University of Agricultural Sciences, Bangalore (UAS-B), in his inaugural address of the UAS-B's first ever India Mushroom Summit - 2025, that was inaugurated in the city on Monday.

The summit, being held in collaboration with Milkyway Technologies Limited, Dr. Kurades and Agro Products, Poland, will bring together scientists working on mushrooms from across the world.

"Mushrooms are truly a miracle crop, rich in protein, vitamins, and minerals, and can even be grown from agricultural waste. Mushroom farming is not only an eco-friendly and low-input activity, but it also provides high economic returns, especially for small and marginal farmers. It requires minimal land, less water, and can be practised throughout the year, making it a profitable venture even in limited spaces," Mr. Suresh said.



UAS-B Vice-Chancellor S.V. Suresh inaugrating India Mushroom Summit in Bengaluru on Monday. SPECIAL ARRANGEMENT

'Mushrooms are truly a miracle crop, rich in protein, vitamins, and minerals, and can even be grown from agricultural waste'

Sangam Kurade, Chief Executive Officer (CEO) of Dr. Kurades, said that even though mushroom cultivation is a promising venture, the existing market in India was very limited compared to China and other countries. "We need to popularise this product and widen the market. Mushrooms are one of the fastest growing vegetables. There is a lot of scope for the product in a country like India with a large vegetarian consumer base," he said. "At this Summit, we will deliberate on policies and industrial partnerships that can strengthen this sector, creating jobs, improving soil health, reducing chemical dependence, and contributing to sustainability and economic development," he said.

Anurag Saxena, CEO, Milkyway Technologies Limited, Daniel Dajewski, CEO, Agro Products, Poland, and others were present.

The Hindu. Pg.04



ಸಮ್ಮೇಳನದಲ್ಲಿ ಎಸ್.ವಿ. ಸುರೇಶ ಅವರು ಅಣಬೆಗಳನ್ನು ಪ್ರದರ್ಶಿಸಿದರು. ಕೆ.ಪಿ. ರಘುಪ್ರಸಾದ್, ಅತುಲ್ ಸಕ್ಲೇನಾ, ಎಚ್.ಎಸ್. ಶಿವರಾಮು ಉಪಸ್ಥಿತರಿದ್ದರು

'ಅಣಬೆ ಸಮಗ್ರ ಕೃಷಿಯ ಭಾಗವಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಣಬೆ ಬೇಸಾಯವನ್ನು ಸಮಗ್ರ ಕೃಷಿಯ ಪ್ರಮುಖ ಭಾಗವಾಗಿ ಪರಿಗಣಿಸಬೇಕು' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿ.ಸುರೇಶ ಹೇಳಿದರು.

ಮಿಲ್ಕಿವೇ ಟೆಕ್ನಾಲಜೀಸ್, ಡಾ.ಕುರಾಡೇಸ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಿರುವ ಅಂತರರಾಷ್ಟ್ರೀಯ ಅಣಬೆ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಮ್ಮ ದೇಶದ ಜನಸಂಖ್ಯೆಗೆ ಅನುಗುಣವಾಗಿ ಅಣಬೆಯನ್ನು ಉತ್ಪಾದಿಸಬೇಕು. ರೈತರು ಹೆಚ್ಚಾಗಿ ಅಣಬೆ ಕೃಷಿ ಮಾಡುವ ಮೂಲಕ ಆಹಾರ ಭದ್ರತೆಯ ಜೊತೆಗೆ ಪೌಷ್ಟಿಕ ಭದ್ರತೆಯನ್ನು ಒದಗಿಸಬೇಕು. ಚೀನಾ ಮತ್ತು ಇತರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಅಣಬೆ ಮಾರುಕಟ್ಟೆ ಇನ್ನೂ ಸೀಮಿತವಾಗಿದೆ. ಅಣಬೆ ಒಂದು ಪೌಷ್ಟಿಕ ಆಹಾರವಾಗಿದ್ದು, ಇದನ್ನು ಜನಪ್ರಿಯಗೊಳಿಸುವ ಮೂಲಕ ಮಾರುಕಟ್ಟೆಯ ಜಾಲವನ್ನು ವಿಸ್ತರಿಸಬೇಕಾಗಿದೆ' ಎಂದು ತಿಳಿಸಿದರು.

ಡಾ. ಕುರಾಡೇಸ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿಇಒ) ಸಂಗಮ್ ಕುರಾಡೇಸ್ ಮಾತನಾಡಿ, 'ಅಣಬೆ ಕೃಷಿ ಅತ್ಯಂತ ಭರವಸೆಯ ಕ್ಷೇತ್ರವಾಗಿದೆ. ಇದರಲ್ಲಿ ಪ್ರೋಟಿನ್, ವಿಟಾಮಿನ್ ಮತ್ತು ಖನಿಜಗಳು ಸಮೃದ್ಧವಾಗಿವೆ. ಇದನ್ನು ಕೃಷಿ ತ್ಯಾಜ್ಯದಿಂದಲೂ ಬೆಳೆಯಬಹುದಾಗಿದೆ. ಅಣಬೆ ಕೃಷಿ ಪರಿಸರ ಸ್ನೇಹಿಯಾಗಿದ್ದು, ಕಡಿಮೆ ಹೂಡಿಕೆ ಮಾಡಿ ಹೆಚ್ಚು ಲಾಭ ಪಡೆಯಬಹುದು' ಎಂದರು.

Prajavani Pg.02

University Of Agricultural Sciences, Bangalore
NAAC A' Accredited
Estate Office, Naik Bhavan, GKVK, Bengaluru-560 065.

No. EO/SPO/kppp/10/2025-26 Dated: 28-10-2025

TENDER NOTIFICATION
(Through Kpp Portal only)

The University of Agricultural Sciences, Bangalore has invited Tender in the prescribed form as per the Standard Tender Document KG-1 and KG-2, from the reputed firms for the procurement of Equipment's.

The Blank Tender Documents can be downloaded from **www.kppp.karnataka.gov.in.** Last date and time for uploading the tender on **10.11.2025 up to 4:00 p.m.** The Technical bid will be opened on **12.11.2025 at 10:30 a.m.** The Financial bid will be opened on **17.11.2025 at 10:30 a.m.** in the Tender Committee Room of Estate Office. Further details can be had from the office of the undersigned during working hours and also refer UAS **website: www.usabangalore.edu.in. Help Desk-91-8046010000, +91-8068948777, support@eprochelpdesk.com.** The University reserves the right to accept or reject any or all the tenders without assigning any reasons.

Sd/-
ESTATE OFFICER

DIPR/CP/RO3548/AAPL/2025-26

The Hindu Pg.09

ಆ್ಯಪ್‌ನಲ್ಲಿ ಎಐ ಟೂಲ್ ಆಳವಡಿಕೆ । ಅನುಮಾನ ಬಂದರೆ ಮರು ಸಮೀಕ್ಷೆ

ಬೆಳೆ ಸಮೀಕ್ಷೆಗೂ AI ತಂತ್ರಜ್ಞಾನ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ಬೆಳೆ ಹಾನಿ ಪರಿಹಾರ, ಕನಿಷ್ಠ ಬೆಂಬಲ ಬೆಲೆ ಯೋಜನೆಯ ಲಾಭ ಪಡೆಯಲು ಕೆಲವರು ತಮ್ಮ ಭೂಮಿಯಲ್ಲಿ ಬೆಳೆ ಬೆಳೆಯದಿದ್ದರೂ ಅನ್ಯ ಜಮೀನಿನ ಬೆಳೆಯನ್ನು ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ನಮೂದಿಸಿ ಸರಕಾರದ ಸೌಲಭ್ಯಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದರು. ಇದನ್ನು ತಡೆಯಲು ಈಗ ಎಐ ಆಧಾರಿತ ಬೆಳೆ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ.

ಕಳೆದ ವರ್ಷ ಪ್ರಾಯೋಗಿಕವಾಗಿ ಆರಂಭವಾದ ಎಐ ಆಧಾರಿತ ಬೆಳೆ ಸಮೀಕ್ಷೆಯನ್ನು ಈ ಬಾರಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲು ಸರಕಾರ ಮುಂದಾಗಿದೆ.

'ಬೆಳೆ ಸಮೀಕ್ಷೆ ಆ್ಯಪ್' ಮೂಲಕ ಖಾಸಗಿ ವ್ಯಕ್ತಿಗಳು (ಪ್ರೈವೇಟ್ ರೆಸಿಡೆಂಟ್ಸ್-ಪಿಆರ್) ಬೆಳೆಯ ಮಾಹಿತಿ ನಮೂದಿಸುತ್ತಿದ್ದರು. ಈ ಆ್ಯಪ್ ರೈತರಿಗೂ ಲಭ್ಯತೆಯಿತ್ತು. ಸಮೀಕ್ಷೆ ವೇಳೆ ಯಾವ ಬೆಳೆ ಎಂದು ನಮೂದಿಸಿ, ಅದರೊಂದಿಗೆ ಪ್ರತಿಯೊಂದು ಜಮೀನಿನ ಫೋಟೊ ಅಪ್‌ಲೋಡ್ ಮಾಡಬೇಕು. ಆದರೆ, ಕೆಲವು ಪಹಣಿಗಳ ಕೃಷಿ ಭೂಮಿಯಲ್ಲಿ ಬೆಳೆ ಬೆಳೆಯದಿದ್ದರೂ ಬೇರೆ ಜಮೀನಿನ ಬೆಳೆಯ ಫೋಟೊ ತೆಗೆದು ಬಳಕ ಬೆಳೆ ಬೆಳೆಯದಿದ್ದ ಜಮೀನಿಗೆ ಆಗಮಿಸಿ ಆ್ಯಪ್‌ಗೆ ಜಿಯೋ ಟ್ಯಾಗ್ ಫೋಟೊ ಅಪ್‌ಲೋಡ್ ಮಾಡುವುದರ ಜತೆಗೆ, ಕೆಲ ವ್ಯಕ್ತಿಗಳು ರೈತರ ಬೆಳೆ ಸಮೀಕ್ಷೆ ಆ್ಯಪ್ ಬಳಸಿ ಕೃತಕ ಛಾಯಾಚಿತ್ರಗಳನ್ನು ಸೆರೆ ಹಿಡಿಯುತ್ತಿದ್ದರು. ಈ ರೀತಿ ಅಕ್ರಮ ಮಾರ್ಗಗಳಲ್ಲಿ ಸರಕಾರಕ್ಕೆ ವಂಚಿಸಲು ಪ್ರಯತ್ನಿಸುತ್ತಿದ್ದರು.





ಕೃತಕ ಬುದ್ಧಿಮತ್ತೆ ಬಳಸಿ ಛಾಯಾಚಿತ್ರಗಳ ನೈಜತೆಯನ್ನು ಪರಿಶೀಲಿಸುವ ಬದಲು, ಎಐ ತಂತ್ರಜ್ಞಾನ ಆಧಾರಿತ ಸ್ಯಾಟಲೈಟ್ ಸಮೀಕ್ಷೆ ಕೈಗೊಳ್ಳುವುದು ಮತ್ತಷ್ಟು ಉತ್ತಮ. ಕನಿಷ್ಠ ಬೆಂಬಲ ಬೆಲೆ ಯೋಜನೆಯ ಲಾಭಕ್ಕಾಗಿ ಪ್ರಸ್ತುತ ಆಗುತ್ತಿರುವ ಬೆಳೆ ಸಮೀಕ್ಷೆ ದುರುಪಯೋಗ ಸರಿಪಡಿಸಬಹುದು ಮತ್ತು ನಿಖರ ಬೆಳೆ ಸಮೀಕ್ಷೆ ಮಾಹಿತಿ ಪಡೆಯಬಹುದು.

-ತಾಳೂರು ರಾಘವೇಂದ್ರರೆಡ್ಡಿ.ಪಿ. ರೈತ, ಬಳ್ಳಾರಿ

ಇದನ್ನು ತಡೆಯಲು ಎಐ ತಂತ್ರಜ್ಞಾನದ ಮೂಲಕ ರೈತರ ಬೆಳೆಗಳನ್ನು ಸಮೀಕ್ಷೆ ಮಾಡಲು ಸರಕಾರ ಮುಂದಾಗಿದೆ. ಇದರಲ್ಲಿ ಯಾವುದೇ ರೈತರ ಬೆಳೆ ಸಮೀಕ್ಷೆ ಬಗ್ಗೆ ಅನುಮಾನ ಬಂದರೆ ಅದನ್ನು ತಿರಸ್ಕರಿಸಿ, ಮರು ಸಮೀಕ್ಷೆ ನಡೆಸಲೂ ಅವಕಾಶ ಕಲ್ಪಿಸಲಾಗಿದೆ.

ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ನಡಿ ಬೆಳೆ ಹಾನಿ ಪರಿಹಾರ ಪಾವತಿಸಲು, ಬೆಳೆ ವಿಮೆ ಪಾವತಿ, ಕನಿಷ್ಠ ಬೆಂಬಲ ಬೆಲೆ ಯೋಜನೆಯ ಪ್ರಯೋಜನ, ಪಹಣಿಯಲ್ಲಿ ಬೆಳೆ ವಿವರ ನಮೂದಿಸಲು, ರೈತರಿಗೆ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಮಂಜೂರು ಮಾಡುವುದೂ ಸೇರಿದಂತೆ ಹಲವು ಮಹತ್ತರ ಕಾರ್ಯಗಳಿಗೆ ಬೆಳೆ ಸಮೀಕ್ಷೆ ಅತ್ಯಗತ್ಯವಾಗಿದೆ. ಹೀಗಾಗಿ, ಕೆಲವರು ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದುದರಿಂದ ಎಐ ಆಧಾರಿತ ಸಮೀಕ್ಷೆ ನಡೆಸಲಾಗುತ್ತದೆ.

ಸರಕಾರದ ಸೌಲಭ್ಯ ನೈಜ ರೈತರಿಗೆ ಸಿಗಬೇಕು ಎಂಬ ಉದ್ದೇಶದಿಂದ ಬೆಳೆ ಸಮೀಕ್ಷೆ ತಂತ್ರಾಂಶ (ಮೊಬೈಲ್ ಆ್ಯಪ್ ಮತ್ತು ವೆಬ್ ಅಪ್ಲಿಕೇಶನ್)ದಲ್ಲಿ 2024-25ರ ಮುಂಗಾರು ಋತುವಿನಿಂದ ಬೆಳೆ ಸಮೀಕ್ಷೆ ದತ್ತಾಂಶದ ಗುಣಮಟ್ಟ ಸುಧಾರಿಸಲು ಮತ್ತು ಛಾಯಾಚಿತ್ರದ ನೈಜತೆ ಪರಿಶೀಲಿಸಲು ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟಲಿಜೆನ್ಸ್) ತಂತ್ರಜ್ಞಾನ ಬಳಸುವುದನ್ನು ಪ್ರಾರಂಭಿಸಲಾಗಿದೆ. ಈ ತಂತ್ರಜ್ಞಾನ ಬಳಸಿ ದತ್ತಾಂಶ ಪರಿಶೀಲಿಸಲಾಗುತ್ತಿದೆ.

ಎಐ ಸಮೀಕ್ಷೆ ಹೇಗೆ?

ಪ್ರಸ್ತುತ ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ (ಎಐ) ಟೂಲ್ ಅಳವಡಿಸಲಾಗಿದೆ. ಸರ್ವೆ ನಂಬರ್, ಹಿಸ್ಸಾ ನಂಬರ್‌ನಲ್ಲೇ ಸಿಂತು 30 ರಿಂದ 150 ಡಿಗ್ರಿ ಒಳಗೆ ತೆಗೆದ ಫೋಟೊಗಳನ್ನು ಮಾತ್ರ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಜತೆಗೆ, ಲೈವ್ ಫೋಟೊವನ್ನೇ ಅಪ್‌ಲೋಡ್ ಮಾಡಬೇಕು. ಇಲ್ಲದಿದ್ದರೆ ಅಂತಹ ಫೋಟೊಗಳನ್ನು ಅಪ್‌ಲೋಡ್ ಮಾಡಲು ಆ್ಯಪ್ ಸಹಕರಿಸುವುದಿಲ್ಲ. ಫೋಟೊಗಳಲ್ಲಿ ಸ್ಪಷ್ಟತೆ ಇರದಿದ್ದರೂ ತಿರಸ್ಕರಿಸುತ್ತದೆ. ಸಮೀಕ್ಷೆ ಆ್ಯಪ್‌ನಲ್ಲಿ ಎಐ ಟೂಲ್‌ನ ಪ್ರೋಗ್ರಾಮ್ ಅಳವಡಿಸಲಾಗಿದೆ. ಒಂದು ವೇಳೆ ತಾಂತ್ರಿಕ ದೋಷ ಅಥವಾ ಇತರೆ ರೀತಿ ಏನಾದರೂ ವಂಚನೆಯಾಗಿರುವ ಬಗ್ಗೆ ಅನುಮಾನ ಬಂದರೆ ಅದನ್ನು ಮೇಲ್ವಿಚಾರಕರು ತಿರಸ್ಕರಿಸಿ ಮರು ಸಮೀಕ್ಷೆಗೆ ಶಿಫಾರಸು ಮಾಡಲಿದ್ದಾರೆ ಎಂದು ಕೃಷಿ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

Vijaya Kar, Pg.08

ಪೌಷ್ಟಿಕ ಭದ್ರತೆಗೆ ಅಣಬೆ ಬೆಳೆಯಿರಿ: ಸುರೇಶ್

ಅಣಬೆಯನ್ನು ಉದ್ಯಮವನ್ನಾಗಿಸಿಕೊಳ್ಳಿ: ಕೃಷಿ ವಿವಿ ಕುಲಪತಿ | ಜಿಕೆವಿಕೆಯಿಂದ ಅಣಬೆ ಅಂತಾರಾಷ್ಟ್ರೀಯ ಸಮ್ಮೇಳನ

■ ಉದಯವಾಣಿ ಸಮಾಚಾರ

ಬೆಂಗಳೂರು: ಅಣಬೆ ಒಂದು ಉತ್ಕೃಷ್ಟ ಪೌಷ್ಟಿಕಾಂಶಭರಿತ ಆಹಾರವಾಗಿದೆ. ಈ ಕೃಷಿಯನ್ನು ಉದ್ಯಮವಾಗಿಸಿಕೊಂಡು ಬೆಳೆಯುವ ನಿಟ್ಟಿನಲ್ಲಿ ರೈತರು, ಯುವ ಉದ್ಯಮಿದಾರರನ್ನು ಉತ್ತೇಜಿಸಿ ಜನಜಾಗೃತಿ ಮೂಡಿಸಬೇಕಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ. ಎಸ್.ವಿ. ಸುರೇಶ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಮಿಲ್ಕಿವೇ ಟೆಕ್ನಾಲಜೀಸ್ ಲಿಮಿಟೆಡ್, ಡಾ. ಕುರಾಡೆಸ್ ಮತ್ತು ಆಗ್ರೋ ಯೋಜನೆ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಸೋಮವಾರ ಇದೇ ಮೊಟ್ಟ ಮೊದಲ ಬಾರಿಗೆ ಏರ್ಪಡಿಸಿದ್ದ ಅಣಬೆ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಆಹಾರ ಭದ್ರತೆಯಲ್ಲಿ ಭಾರತ ಸ್ವಾವಲಂಬಿಯಾಗಿದ್ದರೂ ಗುಣಮಟ್ಟದ ಪೋಷಕಾಂಶವುಳ್ಳ ಆಹಾರ ಉತ್ಪಾದನೆಗೆ ಆದ್ಯತೆ ನೀಡಬೇಕಿದೆ. ದೇಶದಲ್ಲಿ ಹಸಿರು ಕ್ರಾಂತಿಯ ಯಶಸ್ಸು ಆಹಾರ ಕೊರತೆ ನಿವಾರಿಸಿ ಆಹಾರ ಸಮೃದ್ಧರಾಷ್ಟ್ರವನ್ನಾಗಿ ರೂಪಿಸಿದೆ. ಹೆಚ್ಚು ಉತ್ಪಾದನೆ ತಳಗಳ ಪರಿಚಯ, ವೈಜ್ಞಾನಿಕ ಕೃಷಿ ಪದ್ಧತಿಗಳು, ರಾಸಾಯನಿಕ ಗೊಬ್ಬರ ಹಾಗೂ ನೀರಾವರಿ ವ್ಯವಸ್ಥೆಯಿಂದ ಈ ಬದಲಾವಣೆ ಸಾಧ್ಯವಾಗಿದೆ.



ಅಣಬೆ ಸಮ್ಮೇಳನದಲ್ಲಿ ವಿವಿಧ ತಳಗಳ ಅಣಬೆಗಳನ್ನು ಪ್ರದರ್ಶಿಸಲಾಯಿತು.

ಆದರೆ, ಪ್ರಸ್ತುತ ಗುರಿ ಕೇವಲ ಆಹಾರ ಭದ್ರತೆಯಲ್ಲ ಬದಲಾಗಿ ಪೌಷ್ಟಿಕ ಭದ್ರತೆಯಲ್ಲಿ ಸ್ವಾವಲಂಬನೆ ಸಾಧಿಸಬೇಕಿದೆ. ಈ ನಿಟ್ಟಿನಲ್ಲಿ ರೈತರು ರಾಸಾಯನಿಕ ರಹಿತ ಕೃಷಿ ವ್ಯವಸ್ಥೆ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಚೀನಾ ಸೇರಿದಂತೆ ಇತರ ದೇಶಗಳಲ್ಲಿ ಅಣಬೆಯನ್ನು ಆಹಾರ ಉತ್ಪನ್ನವಾಗಿ ಹೆಚ್ಚಾಗಿ ಬಳಕೆಯಾಗುತ್ತಿದೆ. ಇದರಲ್ಲಿ ಪ್ರೋಟೀನ್, ವಿಟಮಿನ್ ಮತ್ತು ಖನಿಜಗಳು ಸಮೃದ್ಧವಾಗಿದೆ, ಭಾರತದಲ್ಲಿ ಈ ಕೃಷಿಯ ಬಗ್ಗೆ ಜಾಗೃತಿ ಕೊರತೆ ಇದೆ. ಇದನ್ನು ಕಡಿಮೆ ವಿಸ್ತೀರ್ಣದಲ್ಲಿ ಕಡಿಮೆ ಖರ್ಚು, ಕಡಿಮೆ ಅವಧಿಯಲ್ಲಿ ಬೆಳೆಯಬಹುದಾಗಿದೆ. ಅಣಬೆಕೃಷಿಯನ್ನು ಸಮಗ್ರ ಕೃಷಿಯ ಪ್ರಮುಖ ಭಾಗವಾಗಿ ಬೆಳೆಯಲು ಉತ್ತೇಜಿಸಿ, ಮಾರುಕಟ್ಟೆ ಜಾಲವನ್ನು ವಿಸ್ತರಿಸುವ ನಿಟ್ಟಿನಲ್ಲಿ ಈ ಸಮ್ಮೇಳನ ಆಯೋಜಿಸಲಾಗಿದೆ. ದೇಶದ ಸುಸ್ಥಿರ, ಪೌಷ್ಟಿಕ ಮತ್ತು ಆರ್ಥಿಕವಾಗಿ ಸಮೃದ್ಧಗೊಳಿಸುವ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದು ಹೇಳಿದರು.

ಕುರಾಡೆಸ್‌ನ ಸಿಇಒ ಸಂಗಮ್ ಕುರಾಡೆಸ್ ಮಾತನಾಡಿ, ಅಣಬೆ ಕೃಷಿಯು ಪರಿಸರ ಸ್ನೇಹಿಯಾಗಿದ್ದು ಕಡಿಮೆ ಹೂಡಿಕೆ ಮತ್ತು ಸಣ್ಣ ರೈತರಿಗೆ ಹೆಚ್ಚು ಲಾಭ ನೀಡುವ ಚಟುವಟಿಕೆಯಾಗಿದೆ. ಕೃಷಿ ತ್ಯಾಜ್ಯದಿಂದಲೂ ಇದನ್ನು ಬೆಳೆಯಬಹುದು. ವರ್ಷಪೂರ್ತಿ ಅತಿ ಕಡಿಮೆ ಭೂಮಿ ಮತ್ತು ನೀರಿನಿಂದಲೂ ಬೆಳೆಸಬಹುದು. ಹಾಗಾಗಿ ಸಣ್ಣ ಜಾಗದಲ್ಲಿಯೂ ಲಾಭದಾಯಕ ಉದ್ಯಮವಾಗಿ ರೂಪಾಂತರ ಗೊಳ್ಳುವ ಸಾಮರ್ಥ್ಯ ಹೊಂದಿದೆ ಎಂದರು.

ಗ್ರೋಡೀಜಲ್ ವೆಂಚರ್ಸ್ ಲಿ. ಸಿಇಒ ಅತುಲ್ ಸಕ್ಸೇನಾ ಮಾತನಾಡಿದರು. ಮಿಲ್ಕಿವೇ ಟೆಕ್ನಾಲಜೀಸ್ ಲಿಮಿಟೆಡ್ ಸಿಇಒ ಅನುರಾಗ್ ಸಕ್ಸೇನಾ, ಡೇನಿಯಲ್ ಡಚಿವಿಸ್ಕಿ ಸಂಶೋಧನಾ ನಿರ್ದೇಶಕ ಡಾ. ಎಚ್.ಎಸ್. ಶಿವರಾಮು, ಪ್ರಾಧ್ಯಾಪಕ ಡಾ. ಎನ್. ಉಮಾಶಂಕರ್‌ಮಾತನಾಡಿದರು. ಸಮ್ಮೇಳನದಲ್ಲಿ ರಷ್ಯಾ, ಪೋಲೆಂಡ್ ಸೇರಿದಂತೆ ವಿವಿಧ ದೇಶಗಳ ವಿಜ್ಞಾನಿಗಳು, ಸಂಶೋಧಕರು ಹಾಗೂ ಅಣಬೆ ಉದ್ದಿಮೆದಾರರು ಪಾಲ್ಗೊಂಡಿದ್ದರು.

Udaya vani Pg.03

DIVERSIFICATION STRATEGY BEARS FRUIT

Non-US Mkts Make Up for Export Loss due to Tariffs



YOGEESH

Marine, leather goods, cotton garments, rice shipments to other markets see sharp rise

Kirtika Suneja

New Delhi: India's export diversification strategy to cushion the impact of the steep 50% tariffs imposed by the US has begun showing results with its cotton readymade garment exports growing to the UAE, France and Japan in September while they fell 25% on-year to the US. Disaggregated official data for September shows marine products exports to the US were down 26.9% but those to China, Vietnam and Thailand rose above 60%. Similarly, outbound shipments of certain gems and jewellery, basmati rice, tea, carpet and leather goods have seen a decline to the US market while growing in others.

"Export diversification is visible and is supported by India's free trade agreements, thrust on production-linked incentive schemes and the integration with global supply chains," said an official. India's merchandise exports rose 6.7% year-on-year to $36.38 billion in September but the shipments to the US—its largest market—fell 11.93% to $5.46 billion.

While the US accounts for 18-20% of India's overall merchandise exports, certain sub-sectors are highly dependent on the US such as 60% of carpet exports, 50% of made-ups, 30% of gems and jewellery, and 40% of apparel exports go to the US. Washington imposed an across-the-board 25% tariff on all Indian-origin goods, effective August 7.

These were doubled with effect from August 25. The two sides are negotiating a bilateral trade agreement (BTA) with an aim to increase bilateral trade to $500 billion by 2030.

As per the commerce and industry ministry data, India's exports of kitchen staples such as basmati rice and tea to the US fell. While the US is not the top destination for Indian tea, exports fell 22% in September as against the corresponding period last year.

The beverage's exports to other geographies including the UAE, Iraq and Germany grew. Basmati rice exports to Iran rose six-fold to $41.07 million.

"Export diversification has started to happen and this is healthy for the growth of India's exports," said Ajay Sahai, director general, Federation of Indian Export Organisations.

Handmade carpet exports to the US were down 26.14% but increased to Canada and Sweden in September.

FOR FULL REPORT, GO TO www.economictimes.com

Eco. Times Pg.08